ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಮುಳಬಾಗಿಲು

ಸಿ.ಸಿ. ಸಂಖ್ಯೆ: 629/ 2020

ಪಿ.ಡಬ್ಲೂಃ 1

ಪ್ರಮಾಣೀಕರಿಸಿದ ದಿನಾಂಕಃ 17.11.2025

ಪಾಟೀ ಸವಾಲುಃ- ಆರೋಪಿ ಪರ ಎಸ್ ಬಿ ಎ ವಕೀಲರಿಂದಃ-

ನಗರ ಸಬೆ ಸದಸ್ಯರು ನೀಡಿದ ದೂರನ್ನು ನಾನು ಪೋಲಿಸರಿಗೆ ನೀಡಿರುತ್ತೇನೆ. ವಾರ್ಡ ನಂ 16 ನಗರ ಸಭೆ ದಾಖಲಾತಿಯನ್ನು ಯಾರು ಸೃಷಿಪಡಿಸಿರುತ್ತಾರೆ ಎಂದು ನಿಮಗೆ ನಿಖರವಾಗಿ ಗೊತ್ತಿಲ್ಲ ಎಂದರೆ ಸರಿ. ಮುಂದುವರೆದು ಮಾರಾಟ ಮಾಡಿರುವವರೇ ಸೃಷ್ಟಿಸಿರುತ್ತಾರೆ. ದಿಃ 29.11.2017 ರಂದು ಪೋಲಿಸರಿಗೆ ದೂರು ನೀಡಿರುತ್ತೇನೆ. ದಿಃ 01.12.2017 ರಂದು ಪೋಲಿಸರು ಪ್ರಕರಣ ದಾಖಲು ಮಾಡಿರುತ್ತಾರೆ ಎಂದರೆ ಸರಿ . ಅರೋಪಿ ಯಾವ ಆಸ್ತಿಗೆ ಸಂಬಂದಿಸಿದಂತೆ ದಾಖಲೆಯನ್ನು ಸಷ್ಟಮಾಡಿರುತ್ತಾರೆ ಎಂದರೆ ಖಾತೆ ನಂ 9923/5. ಸದರಿ ಆಸ್ತಿಯ ನಿಜವಾದ ಮಾಲೀಕರು ಯಾರು ಎಂದರೆ ಬೇರೆಯವರ ಹೆಸರು ಇದ್ದು ಅವರ ಹೆಸರು ಈಗ ಹೇಳಲಾಗುವುದಿಲ್ಲ. ನಿಜವಾದ ಮಾಲೀಕರು ಬಂದು ನಿಮ್ಮ ಕವೇರಿಗೆ ದೂರು ನೀಡಿರುತ್ತಾರಾ ಎಂದರೆ ಇಲ್ಲ. ನೀವು ದೂರು ನೀಡಿ ಬಂದ ನಂತರ ಪೋಲಿಸರು ನಿಮ್ಮನ್ನು ವಿಚಾರಣೆ ಮಾಡಿರುತ್ತಾರಾ ಎಂದರೆ ಮಧ್ಯದಲ್ಲಿ ಒಂದು ಬಾರಿ ಕರೆಸಿರುತ್ತಾರೆ. ದೂರು ನೀಡಿದ ನಂತರ ಯಾವಾಗ ವಿಚಾರಣೆ ಮಾಡಿರುತ್ತಾರೆ ಎಂದರೆ ದೂರು ನೀಡಿದ 4-5 ದಿನಗಳ ನಂತರ ವಿಚಾರಣೆ ಮಾಡಿದ್ದು 2020 ರಲ್ಲಿ ಮರು ಹೇಳಿಕೆ ಪಡೆದಿರುತ್ತಾರೆ. ಅದನ್ನು ಹೊರತುಪಡಿಸಿ ಬೇರೆ ಸಮಯದಲ್ಲಿ ವಿಚಾರಣೆ ಮಾಡಿಲ್ಲ ಎಂದರೆ ಸರಿ ,

ಪ್ರಕರಣಕ್ಕೆ ಸಂಬಂದಪಟ್ಟಂತೆ ಉಪ ನೋಂದಣಾಧಿಕಾರಿಗಳ ಕಛೇರಿಗೆ ಹೋಗಿದ್ದಿರಾ ಎಂದರೆ ನಗರ ಸಬೆ ಸದಸ್ಯರು ದೂರು ನೀಡಿದ ನಂತರ ಮರು ದಿನ ಹೋಗಿರುತ್ತೇನೆ. ಅಲ್ಲಿ ವಿಚಾರಿಸಿದಾಗ ಮ್ಯಾನುಯಲ್ ಖಾತಾ ಮೇಲೆ ನೋದಣಿ ಮಾಡಿರುವುದಾಗಿ ತಿಳಿಸಿರುತ್ತಾರೆ. ಉಪ ನೋಂದಣಾಧಿಕಾರಿಗಳ ಕಛೇರಿಯಿಂದ ದಾಖಲೆ ಪಡೆದುಕೊಂಡಿರುತ್ತೀರಾ ಎಂದರೆ ನಗರಸಭಾ ಸದಸ್ಯರೇ ದಾಖಲೆ ನೀಡಿರುತ್ತಾರೆ. ಕ್ರಯ ಪತ್ರದ ದಿನಾಂಕ ಏನು ಎಂದರೆ 29.11.2011 ರ ಒಂದು ವಾರ ಮುಂಚಿತವಾಗಿ ಅಗಿರುತ್ತದೆ. ಉಪ ನೋಂದಣಾಧಿಕಾರಿಗಳು ಮುಂದೆ ಹಾಜರುಪಡಿಸಿದ ದಿನವೇ ನೋಂದಣಿ ಅಗಿರುತ್ತದೆಯಾ ಎಂದರೆ ಗೊತ್ತಿಲ್ಲ. ಪೋಲಿಸರು ಯಾವ ದಿನಾಂಕ ಮರು ಹೇಳಿಕೆ ಪಡೆದಿರುತ್ತಾರೆ ಎಂದರೆ ಜನವರಿ 2020 ರಲ್ಲಿ ಪಡೆದಿರುತ್ತಾರೆ. ಮರು ಹೇಳಿಕೆಯಲ್ಲಿ ಕ್ರಯ ಪತ್ರದ ಬಗ್ಗೆ ಹೇಳಿರುತ್ತೀರಾ ಎಂದರೆ ಮೊದಲು ಏನು ಹೇಳಿಕೆ ನೀಡಿರುತ್ತೇನೆ ಅದನ್ನೇ ಹೇಳಿರುತ್ತೇನೆ. ನಗರ ಸಭೆ ಸದಸ್ಯರು ನನಗೆ 29.11.2017 ರಂದು ದೂರು ನೀಡಿರುತ್ತಾರೆ. ನಂತರ ನನಗೆ ಯಾರಿಗೆ ಕ್ರಯ ಪತ್ರ ಮಾಡಿಕೊಟ್ಟಿರುತ್ತಾರೆಂದು ಗೊತ್ತಾಗಿರುತ್ತದೆ. ನಾನು ದೂರು ನೀಡುವ ಮೊದಲು ನಮ್ಮ ಕಛೇರಿಯಲ್ಲಿ ಪರಿಶೀಲನೆ ಮಾಡಿ ನಂತರ ದೂರು ನೀಡಿರುತ್ತೇನೆ. ಕ್ರಯ ಪತ್ರವನ್ನು ಮಾತ್ರ ನೋಡಿ ದೂರು

ನೀಡಿರುತ್ತೀರಾ ಎಂದರೆ ಮ್ಯಾನುಯಲ್ ಖಾತಾವನ್ನು ಸಹ ನೋಡಿರುತ್ತೇನೆ. ಅರೋಪಿಯು ನಾನು ಹೇಳುವಂತೆ ಯಾವುದೇ ದಾಖಲೆಯನ್ನು ಸೃಷ್ಟಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಗರ ಸಭೆ ಸದಸ್ಯರ ಒತ್ತಡದ ಮೇಲೆ ದೂರುನೀಡಿರುತ್ತೇನೆ ಎಂದರೆ ಸರಿಯಲ್ಲ. ನಿಮ್ಮ ಮರು ಹೇಳಿಕೆ ನೀಡುವ ಸಮಯದಲ್ಲಿ ಪೋಲಿಸರಿಗೆ ಯಾವುದಾದರೂ ದಾಖಲೆ ನೀಡಿರುತ್ತೀರಾ ಎಂದರೆ ದೂರು ನೀಡುವಾಗಲೇ ನೀಡಿರುತ್ತೇನ್ನೆ ಅರೋಪಿ ಯಾವುದೇ ದಾಖಲೆ ಸೃಷಿಸಿಲ್ಲ ಸದರಿ ದಾಖಲೆಗಳಿಗೂ ಅರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಮರು ಹೇಳಿಕೆಯನ್ನು ಪೋಲಿಸ್ ಠಾಣೆಯಲ್ಲಿ ನೀಡಿರುತ್ತೇನೆ. ನೀವು ಯಾವುದೇ ಮರು ಹೇಳಿಕೆ ನೀಡಿಲ್ಲದಿದ್ದರೂ ಪ್ರಕರಣ ಸಲುವಾಗಿ ಸೃಷಿಸಲಾಗಿದೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ- ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ).

ಓದಿ ಹೇಳಿ ಕೇಳಿ ಸರಿ ಇದೆ

(ಹರೀಶ್ ಜಿ )
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ, ಮುಳಬಾಗಿಲು